MARCH 18, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಇಂದಿನಿಂದ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ – 1 ಆರಂಭ; ಗಣ್ಯರಿಂದ ವಿದ್ಯಾರ್ಥಿಗಳಿಗೆ ಶುಭ ಹಾರೈಕೆ.
- 'ನಶೆ ಮುಕ್ತ ಭಾರತ' ಹಾಗೂ 'ಅಂಗಾಂಗ ದಾನ'ದ ಬಗ್ಗೆ, ಬಳ್ಳಾರಿಯಲ್ಲಿ, ಜನ ಜಾಗೃತಿ ನಡಿಗೆ; ಇಂದು ಬೆಳಗ್ಗೆ 7:30ಕ್ಕೆ, ರಾಜ್ಯಪಾಲರಿಂದ, ಚಾಲನೆ.
- ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕದಲ್ಲಿ, ಅಧಿಕ ಕುಸುಬೆ ಇಳುವರಿ; ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ, ಖರೀದಿಸುವಂತೆ, ಕೇಂದ್ರಕ್ಕೆ ಪತ್ರ.
- ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ; ರೈತರ ಪರವಾಗಿ, ಮರು ರೂಪಿಸಿದ, ಕೇಂದ್ರ ಸರ್ಕಾರ.

<><><>

ಈಗ ವಾರ್ತೆಗಳ ವಿವರ

<><><>

ಇಂದಿನಿಂದ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ – 1 ಆರಂಭವಾಗಲಿದ್ದು, ಏಪ್ರಿಲ್ 2ನೇ ತಾರೀಖಿನ ವರೆಗೆ, ನಡೆಯಲಿದೆ. ಈ ಬಾರಿ, ರಾಜ್ಯದ ಒಟ್ಟು, 15 ಸಾವಿರದ 941 ಪ್ರೌಢಶಾಲೆಗಳಿಂದ, 9 ಲಕ್ಷ 2 ಸಾವಿರದ 8 ನೂರಾ 89 ವಿದ್ಯಾರ್ಥಿಗಳು, ಪರೀಕ್ಷೆಗೆ ಹೆಸರು ನೋಂದಾಯಿಸಿದ್ದಾರೆ. 2 ಸಾವಿರದ 8 ನೂರಾ 71 ಕೇಂದ್ರಗಳಲ್ಲಿ, ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯಲಿವೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ, ವಿಪಕ್ಷ ನಾಯಕ ಆರ್. ಅಶೋಕ ಪರೀಕ್ಷಾರ್ಥಿಗಳಿಗೆ ಶುಭ ಹಾರೈಸಿದ್ದಾರೆ.

<><><>

ಬೆಳಗಾವಿ ವಿಭಾಗದ, 9 ಶೈಕ್ಷಣಿಕ ಜಿಲ್ಲೆಗಳ, 792 ಪರೀಕ್ಷಾ ಕೇಂದ್ರಗಳಲ್ಲಿ, 2 ಲಕ್ಷ 52 ಸಾವಿರದ 262 ವಿದ್ಯಾರ್ಥಿಗಳು, ಪರೀಕ್ಷೆ ಬರೆಯಲಿದ್ದಾರೆ ಎಂದು, ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ, ಈಶ್ವರ ಉಳ್ಳಾಗಡ್ಡಿ ತಿಳಿಸಿದ್ದಾರೆ.

<><><>

ಧಾರವಾಡ ಜಿಲ್ಲೆಯಲ್ಲಿ, 105 ಪರೀಕ್ಷಾ ಕೇಂದ್ರಗಳಿದ್ದು, 27 ಸಾವಿರದ 9 ನೂರಾ 93 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹೆಸರು ನೋಂದಾಯಿಸಿದ್ದಾರೆ.

<><><>

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ, ಧಾರವಾಡ ಜಿಲ್ಲೆಯ, ಸಹಾಯಕ ಯೋಜನಾ ಸಮನ್ವಯಾಧಿಕಾರಿ, ಡಾಕ್ಟರ್ ರೇಣುಕಾ ಅಮಲಝರಿ, ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ, ಕೆಲವು ಮಹತ್ವದ ಸೂಚನೆ ನೀಡಿದ್ದಾರೆ.

<><><>

ಡಾ. ರೇಣುಕಾ ಅಮಲಝರಿ ಧ್ವನಿ 60 ಸೆಕೆಂದುಗಳು

<><><>

ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಲಗ್ನತೆಯ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ ವಿವಿಧ ಮಹಾವಿದ್ಯಾಲಯಗಳು, ಮಾದಕ ವಸ್ತುಗಳ ನಿಯಂತ್ರಣ ಘಟಕದ ಸಹಯೋಗದಲ್ಲಿ, 'ನಶೆ ಮುಕ್ತ ಭಾರತ ಹಾಗೂ ಕರ್ನಾಟಕ', 'ನಶೆ ಮುಕ್ತ ಕಾಲೇಜ್ ಕ್ಯಾಂಪಸ್' ಮತ್ತು ಮಾನವ ಅಂಗಾಂಗ ದಾನದ ಬಗ್ಗೆ, ಜನ ಜಾಗೃತಿ ನಡಿಗೆ ಆಯೋಜಿಸಿವೆ. ಇಂದು, ಬೆಳಗ್ಗೆ 7:30ಕ್ಕೆ, ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದ ಮೈದಾನದಲ್ಲಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ, ಜನ ಜಾಗೃತಿ ನಡಿಗೆಗೆ ಚಾಲನೆ ನೀಡಲಿದ್ದಾರೆ. 25ಕ್ಕೂ ಹೆಚ್ಚು ಮಹಾವಿದ್ಯಾಲಯಗಳಿಂದ, 400 ಅಧ್ಯಾಪಕರು ಮತ್ತು 5 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡು, ಕಿತ್ತೂರು ರಾಣಿ ಚನ್ನಮ್ಮ ಪ್ರೌಢ ಶಾಲೆಯ ಆವರಣದಲ್ಲಿ, ವಾಕಥಾನ್ ಸಮಾರೋಪಗೊಳ್ಳಲಿದೆ.

<><><>

ರಾಜ್ಯದ ಮಹತ್ವದ ನೀರಾವರಿ ಯೋಜನೆಗಳಾದ,ಕೃಷ್ಣಾ ಮೇಲ್ದಂಡೆ, ಮಹಾದಾಯಿ, ತುಂಗಭದ್ರಾ ಹಾಗೂ ಮೇಕೆದಾಟು ಅನುಷ್ಠಾನದ, ಅಡೆತಡೆಗಳ ನಿವಾರಣೆಗೆ, ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಕಾನೂನು ಕ್ರಮಗಳ ಕುರಿತು, ಹೊಸ ದಿಲ್ಲಿಯ ಕರ್ನಾಟಕ ಭವನದಲ್ಲಿ, ಕರ್ನಾಟಕದ ಸಂಸದರು ಹಾಗೂ ಹಿರಿಯ ನ್ಯಾಯವಾದಿಗಳೊಂದಿಗೆ, ಜಲಸಂಪನ್ಮೂಲ ಖಾತೆ ಸಚಿವ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ವಿಶೇಷ ಸಭೆ ನಡೆಸಿದರು.

<><><>

ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿರುವ, ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ, ರಾಜ್ಯದ ನೀರಾವರಿ ಯೋಜನೆಗಳ ತಜ್ಞರು ಹಾಗೂ ವಕೀಲರು ಸಭೆಯಲ್ಲಿ ಪಾಲ್ಗೊಂಡು, ಕೈಗೊಳ್ಳಬೇಕಿರುವ ಕಾನೂನು ಕ್ರಮಗಳ ಕುರಿತು ಚರ್ಚಿಸಿದ್ದಾಗಿ, ತಿಳಿಸಿದ್ದಾರೆ. ಹೊಸ ದಿಲ್ಲಿಯ, ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿ, ಟಿ.ಬಿ.ಜಯಚಂದ್ರ, ಸಚಿವರಾದ ಎಚ್.ಕೆ.ಪಾಟೀಲ ಹಾಗೂ ಎನ್.ಎಸ್.ಬೋಸರಾಜು ಪಾಲ್ಗೊಂಡಿದ್ದರು.

<><><>

ಬೇಡ್ತಿ–ವರದಾ ನದಿ ಜೋಡಣೆ ಯೋಜನೆ,ಮನರ್ ಪರಿಶೀಲಿಸುವ ಅಗತ್ಯವಿದ್ದು, ತಜ್ಞರ ಜೊತೆ, ಉನ್ನತಾಧಿಕಾರಿಗಳ ಸಮಾಲೋಚನಾ ಸಭೆ ನಡೆಸಿ, ಸಾಧಕ–ಬಾಧಕಗಳನ್ನು ಪರಿಗಣಿಸುವುದಾಗಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಉತ್ತರಕನ್ನಡ ಜಿಲ್ಲೆಯ, ಪರಿಸರಾಸಕ್ತರ ನಿಯೋಗಕ್ಕೆ, ಭರವಸೆ ನೀಡಿದ್ದಾರೆ. ಬೆಂಗಳೂರು ವಿಧಾನಸೌಧದ, ನೀರಾವರಿ ಖಾತೆ ಸಚಿವರ, ವಿಶೇಷ ಸಭಾ ಕೊಠಡಿಯಲ್ಲಿ, ಸಭೆ ನಡೆಸಿದ ಅವರು, ಅಘನಾಶಿನಿ, ವೇದಾವತಿ ನದಿ ತಿರುವು ಯೋಜನೆ ಬಗ್ಗೆ, ಆರಂಭಿಕ ಪರಿಶೀಲನೆಯೇ ಆಗಿಲ್ಲ;

ನದಿ ಜೋಡಣೆ ಯೋಜನೆಗಳು, ಗಂಭೀರ ವೈಜ್ಞಾನಿಕ ಅಂಶಗಳನ್ನು ಒಳಗೊಂಡಿದ್ದು, ಮಲೆನಾಡಿನ ಜನ ಆತಂಕ ಪಡಬಾರದು; ರಾಜ್ಯ ಸರ್ಕಾರ ಅವರ ಪರವಾಗಿದೆ ಎಂದು, ಆಶ್ವಾಸನೆ ನೀಡಿದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕಲಬುರಗಿ, ಬೀದರ, ರಾಯಚೂರು, ವಿಜಯಪುರ, ಗದಗ, ಹಾವೇರಿ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ, ಹೆಚ್ಚು ಪ್ರಮಾಣದಲ್ಲಿ, ಎಣ್ಣೆಕಾಳು ಕುಸುಬೆ ಬೆಳೆಯಲಾಗುತ್ತದೆ. ಅತಿ ಹೆಚ್ಚು ಪ್ರದೇಶದಲ್ಲಿ, ಕುಸುಬೆ ಬೆಳೆಯಲಾಗಿದ್ದು, ಮುಕ್ತ ಮಾರುಕಟ್ಟೆಯಲ್ಲಿ ದರ ಕುಸಿತದ ಹಿನ್ನೆಲೆ, ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ, ಕುಸುಬೆ ಖರೀದಿ ಕೇಂದ್ರ ತೆರೆಯುವಂತೆ, ರಾಜ್ಯ ಕೃಷಿ ಇಲಾಖೆ, ಕಳೆದ 7ನೇ ತಾರೀಖು, ಕೇಂದ್ರ ಕೃಷಿ ಸಚಿವಾಲಯಕ್ಕೆ ಪತ್ರ ಬರೆದು, ಮನವಿ ಮಾಡಿದೆ. ಕಲಬುರಗಿ ಜಿಲ್ಲೆಯಾದ್ಯಂತ, 16 ಸಾವಿರ ಹೆಕ್ಟರ್ ಪ್ರದೇಶದಲ್ಲಿ, ಕುಸುಬೆ ಬೆಳೆಯಲಾಗಿದೆ. ಕಲಬುರಗಿ ವಿಭಾಗದ, ಕೃಷಿ ಇಲಾಖೆ, ಜಂಟಿ ನಿರ್ದೇಶಕ, ಸಮದ್ ಪಟೇಲ, ಪ್ರದೇಶ ಸಮಾಚಾರಕ್ಕಾಗಿ, ಇಲಾಖೆ ಕೈಗೊಂಡ ಕ್ರಮಗಳ ಕುರಿತು, ಮಾಹಿತಿ ನೀಡಿದ್ದಾರೆ.

<><><>

ಸಮದ ಪಟೇಲ್ 58 ಸೆಕೆಂದುಗಳು

<><><>

ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯನ್ನು, ಇನ್ನಷ್ಟು ರೈತಪರ ಹಾಗೂ ಕೃಷಿ ಸ್ನೇಹಿಯಾಗಿ, ಕೇಂದ್ರ ಸರ್ಕಾರ ಮರು ರೂಪಿಸಿದೆ. ಹೊಸ ನಿಯಮಾವಳಿ ಅಡಿ, ವಿಮಾ ಕಂಪೆನಿಗಳು, ರೈತರ ಹಕ್ಕುಗಳನ್ನು, 21 ದಿನಗಳಲ್ಲಿ ಇತ್ಯರ್ಥಪಡಿಸಲು ವಿಫಲವಾದರೆ, ಬಾಕಿ ಮೊತ್ತಕ್ಕೆ, ಶೇಕಡ 12 ರ ಷ್ಟ ಬಡ್ಡಿ ಸೇರಿಸಿ, ಪಾವತಿಸಬೇಕಾಗುತ್ತದೆ. ಕೃಷಿಕರು, ಬೆಳೆ ವಿಮೆಗೆ ಸಂಬಂಧಿಸಿ, ಯಾವುದೇ ದೂರುಗಳಿದ್ದಲ್ಲಿ, 'ಕೃಷಿ ರಕ್ಷಕ್ ಪೋರ್ಟಲ್'ನಲ್ಲಿ ದೂರು ದಾಖಲಿಸಬಹುದು. ಈ ಪೋರ್ಟಲ್ ನಲ್ಲಿ, ಈ ವರೆಗೆ, ಸುಮಾರು 2 ಲಕ್ಷದ 71 ಸಾವಿರ ದೂರುಗಳು ದಾಖಲಾಗಿವೆ. ಅವುಗಳ ಬಗ್ಗೆ ತನಿಖೆ ನಡೆಸಿ, ಕಟ್ಟುನಿಟ್ಟಿನ ಕ್ರಮವನ್ನು, ಕೇಂದ್ರ ಕೃಷಿ ಸಚಿವಾಲಯ ಕೈಗೊಳ್ಳುತ್ತಿದೆ. ರೈತರ ಬೆಳೆಗಳಿಗೆ, ನ್ಯಾಯಯುತ ಬೆಲೆ ಒದಗಿಸಲು, ಕೇಂದ್ರ ಸರ್ಕಾರ, ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ, ಈ ವ ರ್ಷ ಗೋಧಿ, ಭತ್ತ, ಎಣ್ಣೆಕಾಳು ಮತ್ತು ಬೇಳೆಕಾಳುಗಳನ್ನು, ಖರೀದಿಸಿದೆ.

<><><>

ಶಿವಮೊಗ್ಗ ಜಿಲ್ಲೆಯಲ್ಲಿ, ಕ್ಯಾಸನೂರು ಮಂಗನ ಕಾಯಿಲೆ – ಕೆ.ಎಫ್.ಡಿ.,59 ಪ್ರಕರಣಗಳು, ಈ ವರೆಗೆ ಪಾಸಿಟಿವ್ ಬಂದಿದ್ದು, ಓರ್ವ ವ್ಯಕ್ತಿ ಸಾವನ್ನಪ್ಪಿದ್ದಾರೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ನಾಗರಾಜ ನಾಯಕ, ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಅಧ್ಯಕ್ಷತೆಯಲ್ಲಿ ಜರುಗಿದ, ಆರೋಗ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು, ಈ ಮಾಹಿತಿ ನೀಡಿದರು. ಸಾಗರ, ಸೊರಬ, ಹೊಸನಗರ ಮತ್ತು ತೀರ್ಥಹಳ್ಳಿ ಭಾಗದ ಜನ, ಎಚ್ಚರಿಕೆ ವಹಿಸಬೇಕು. ತೋಟಕ್ಕೆ, ಕಾಡಿಗೆ ತೆರಳುವಾಗ, ಜನರು ಹಾಗೂ ತಮ್ಮ ಜಾನುವಾರುಗಳಿಗೆ ಡೇಪಾ ತೈಲವನ್ನು ಲೇಪಿಸುವಂತೆ ಕೋರಿದರು.

114 ಮಂಗಗಳ ಸಾವು ಸಂಭವಿಸಿದ್ದು, 31 ಶವ ಪರೀಕ್ಷೆಯಲ್ಲಿ, ಕೆ.ಎಫ್.ಡಿ. ವೈರಾಣು ಪತ್ತೆಯಾಗಿದೆ. ಮಂಗ ಸತ್ತಿರುವ ಹಾಟ್‌ಸ್ಪಾಟ್‌ಗಳಲ್ಲಿ ಹೆಚ್ಚಿನ ನಿಗಾ ವಹಿಸಬೇಕು. ಸಾರ್ವಜನಿಕರು ಸಾಮಾನ್ಯ ಜ್ವರ ಲಕ್ಷಣಗಳನ್ನು ಸಹ, ಗಂಭೀರವಾಗಿ ಪರಿಗಣಿಸಿ, ಕೂಡಲೇ ಪರೀಕ್ಷಿಸಿಕೊಂಡು, ಚಿಕಿತ್ಸೆ ಪಡೆಯಬೇಕು ಎಂದರು.

<><><>

ಧಾರವಾಡ ಜಿಲ್ಲೆ, ಕಲಘಟಗಿ ಪಟ್ಟಣ, ಹಾಗೂ ಮಾಚಾಪುರ ಸುತ್ತಲಿನಕೆಲ ಹಳ್ಳಿಗಳಲ್ಲಿ, ಸಂಜೆ ರಭಸದ ಮಳೆಯೊಂದಿಗೆ, ರಾಶಿ ರಾಶಿ ಆಲಿಕಲ್ಲು ಸುರಿದ ಹಿನ್ನೆಲೆ, ಹಿಮಪಾತದ ಕಣಿವೆಯ ದೃಶ್ಯಗಳನ್ನು ನೆನಪಿಸುವ, ವಾತಾವರಣ ಸೃಷ್ಟಿಯಾಗಿತ್ತು.

<><><>

ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ, ತಾಲೂಕಿನ ವಿವಿಧೆಡೆಗುಡುಗು ಸಿಡಿಲು ಸಹಿತ, ರಭಸದ ಆಲಿಕಲ್ಲು ಮಳೆಯಿಂದ, ಕೃಷಿ ಜಮೀನು ಹಾಗೂ ಜನವಸತಿ ಪ್ರದೇಶಗಳಲ್ಲಿ, ರಾಶಿ ರಾಶಿ ಆಲಿಕಲ್ಲು ಬಿದ್ದು, ಹಿಮಾಚ್ಛಾದಿತ ಪ್ರದೇಶದಂತೆ ಗೋಚರಿಸಿತು. ಜಿಲ್ಲೆಯ ವಿವಿಧೆಡೆ ಬೆಳೆಯಲಾದ, ಟೊಮ್ಯಾಟೊ, ಕಲ್ಲಂಗಡಿ, ಮಂಗಳೂರು ಸೌತೆ, ಬಾಳೆ ಹಾಗೂ ಪಪ್ಪಾಯಾ ಬೆಳೆ ಜೊತೆಗೆ, ನರ್ಸರಿಗಳು ಆಲಿಕಲ್ಲಿನ ಮಳೆಗೆ ಹಾನಿಗೀಡಾಗುವ ಆತಂಕ ರೈತರಲ್ಲಿ ಮನೆ ಮಾಡಿದೆ.

<><><>

ಬೀದರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲೂ ಸಹ, ಮಧ್ಯಾಹ್ನದ ವೇಳೆಗೆ,ಆಲಿಕಲ್ಲು ಸಹಿತ ರಭಸದ ಮಳೆಯಾಗಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ, ಜನಜೀವನ ಅಸ್ತವ್ಯಸ್ತಗೊಂಡಿತು.

<><><>

ಪುರೋಹಿತ ತಿರುನಾರಾಯಣ ನರಸಿಂಹಾಚಾರ್ – ಪು.ತಿ.ನ.,ಕನ್ನಡ, ನವೋದಯ ಕಾಲದ, ಪ್ರಮುಖ ಕವಿ, ಗೀತ ನಾಟಕಕಾರ ಹಾಗೂ ವಿದ್ವಾಂಸರು; ಮಂಡ್ಯ ಜಿಲ್ಲೆ ಮೇಲುಕೋಟೆಯವರಾದ, ರಂಗವಲ್ಲಿಯ ಕವಿ ಪು.ತಿ.ನ., ಸಂಸ್ಕೃತ ಮತ್ತು ಆಂಗ್ಲ ಭಾಷೆಯಲ್ಲಿ, ಪರಿಣಿತಿ ಸಾಧಿಸಿದವರು ಎಂದು, ಮಂಡ್ಯ ಜಿಲ್ಲಾಧಿಕಾರಿ ಕುಮಾರ, ತಿಳಿಸಿದ್ದಾರೆ. ಮಂಡ್ಯದ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ, ಪು.ತಿ.ನ. ಅವರ 121ನೇ ಜಯಂತ್ಯುತ್ಸವಕ್ಕೆ ಚಾಲನೆ ನೀಡಿ, ಮಹಾಕವಿಯ ಚಿಂತನೆ, ಮೌಲ್ಯ ಹಾಗೂ ಆದರ್ಶಗಳು ಯುವಜನರಿಗೆ ದಾರಿದೀಪ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದಿನಿಂದ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ – 1 ಆರಂಭ; ಗಣ್ಯರಿಂದ ವಿದ್ಯಾರ್ಥಿಗಳಿಗೆ ಶುಭ ಹಾರೈಕೆ.
- 'ನಶೆ ಮುಕ್ತ ಭಾರತ' ಹಾಗೂ 'ಅಂಗಾಂಗ ದಾನ'ದ ಬಗ್ಗೆ, ಬಳ್ಳಾರಿಯಲ್ಲಿ, ಜನ ಜಾಗೃತಿ ನಡಿಗೆ; ಇಂದು ಬೆಳಗ್ಗೆ 7:30ಕ್ಕೆ, ರಾಜ್ಯಪಾಲರಿಂದ, ಚಾಲನೆ.
- ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕದಲ್ಲಿ, ಅಧಿಕ ಕುಸುಬೆ ಇಳುವರಿ; ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ, ಖರೀದಿಸುವಂತೆ, ಕೇಂದ್ರಕ್ಕೆ ಪತ್ರ.
- ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ; ರೈತರ ಪರವಾಗಿ, ಮರು ರೂಪಿಸಿದ, ಕೇಂದ್ರ ಸರ್ಕಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>